"ಮಧುರ ಮಕ್ಕಳೇ - ಈ ವಿದ್ಯೆ ತುಂಬಾ ಶ್ರೇಷ್ಠವಾಗಿದೆ, ಇದರಲ್ಲಿ ಮಾಯಾ ರಾವಣನು ವಿಘ್ನ ಹಾಕುತ್ತಾನೆ, ಮಾಯೆಯಿಂದ ತಮ್ಮನ್ನು ತಾವು ಕಾಪಾಡಿಕೊಳ್ಳಬೇಕು"

ಪ್ರಶ್ನೆ: ನಿಮ್ಮ ಸೇವೆಯು ಯಾವಾಗ ವೃದ್ಧಿಯಾಗುತ್ತದೆ?

ಉತ್ತರ: 1) ಯಾವಾಗ ಸೇವೆ ಮಾಡುವ ಮಕ್ಕಳು ನೀವು ಪಕ್ಕಾ ನಷ್ಟಮೋಹ, ಯೋಗಯುಕ್ತರಾಗುತ್ತೀರಿ ಆಗ ನಿಮ್ಮ ಸೇವೆಯಲ್ಲಿ ವೃದ್ಧಿ ಆಗುತ್ತದೆ. ನೀವು ಸರ್ವರ ಉದ್ಧಾರ ಮಾಡಲು ನಿಮಿತ್ತರಾಗಿ ಬಿಡುತ್ತೀರಿ. 2) ಯಾವಾಗ ಪೂರ್ಣ ನಿಶ್ಚಯ ಬುದ್ಧಿಯವರಾಗಿ ತಂದೆಯ ಪ್ರತಿ ಆದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಸೇವೆಯಲ್ಲಿ ಸಫಲತೆ ಸಿಗುತ್ತದೆ.

ಗೀತೆ: ನಾನೊಂದು ಮುಗ್ದ ಮಗುವಾಗಿದ್ದೇನೆ................

ಓಂ ಶಾಂತಿ. ತಂದೆ ಬಂದು ಚಿಕ್ಕ ಚಿಕ್ಕ ಮಕ್ಕಳಿಗೂ ತಿಳಿಸಿ ಕೊಡುತ್ತಾರೆ ಕೆಲವರು ಚಿಕ್ಕವರಾಗಿದ್ದಾರೆ, ಕೆಲವರು ಮಧ್ಯಮ, ಕೆಲವರು ಹಿರಿಯರಾಗಿದ್ದಾರೆ. ಜ್ಞಾನವನ್ನು ಚೆನ್ನಾಗಿ ತಿಳಿದು ಅನೇಕರಿಗೆ ತಿಳಿಸಿಕೊಡುವವರಿಗೆ ದೊಡ್ಡವರೆಂದು ಹೇಳಲಾಗುತ್ತದೆ. ಯಾರು ತಿಳಿಸಿಕೊಡುವುದಿಲ್ಲ ಅವರಿಗೆ ಚಿಕ್ಕ ಮಕ್ಕಳೆಂದು ಕರೆಯಲಾಗುವುದು. ಚಿಕ್ಕ ಮಗುವಾದರೆ ಪದವಿಯು ಚಿಕ್ಕದಾಗಿರುತ್ತದೆ. ಇದು ತಿಳಿದುಕೊಳ್ಳುವ ಮಾತು. ಮನುಷ್ಯರು ಗಂಗೆಯಲ್ಲಿ ಸ್ನಾನ ಮಾಡುತ್ತಾರೆ. ಕುಂಭಮೇಳ ಆಚರಿಸುತ್ತಾರೆ. ಕುಂಭವೆಂದರೆ ಈಗ ಸಂಗಮವಾಗಿದೆ. ಸಂಗಮದ ಮೇಳವಂತೂ ಶ್ರೇಷ್ಠಾತಿ ಶ್ರೇಷ್ಠ ಒಬ್ಬ ಜ್ಞಾನ ಸಾಗರನೊಂದಿಗೆ ಜ್ಞಾನ ನದಿಗಳ ಮಿಲನವೆಂದು ಹೇಳಲಾಗುವುದು. ನೀರಿನ ನದಿಗಳಂತೂ ಬಹಳಷ್ಟು ಇರುತ್ತವೆ. ಆ ನದಿಗಳಲ್ಲವೂ ಸಾಗರದಲ್ಲಿ ಸೇರುತ್ತವೆ. ಆದರೆ ಎಲ್ಲಾ ಕಡೆ ಅಷ್ಟೊಂದು ಮಿಲನವಾಗುವುದಿಲ್ಲ. ಬ್ರಹ್ಮಾಪುತ್ರ ನದಿಯು ಅತಿ ದೊಡ್ಡ ನದಿ ಆಗಿದೆ. ಅದು ಕೋಲ್ಕತ್ತಾದ ಕಡೆ ಹೋಗಿ ಸೇರುತ್ತದೆ. ಈ ರೀತಿ ಸರಸ್ವತಿ, ಗಂಗಾ ಮುಂತಾದ ಬಹಳ ನದಿಗಳಿವೆ, ಆ ನದಿಗಳೆಲ್ಲಾ ಸಾಗರದಲ್ಲಿ ಸೇರುತ್ತವೆ. ನದಿಗಳಿಂದ ಮತ್ತೆ ಕೊಳ ಮುಂತಾದವುಗಳು ಆಗುತ್ತವೆ. ಜ್ಞಾನ ಸಾಗರ ಒಬ್ಬ ಶಿವ ತಂದೆ ಆಗಿದ್ದಾರೆಂದು ಮಕ್ಕಳು ತಿಳಿದುಕೊಂಡಿದ್ದೀರಿ. ಈ ಬ್ರಹ್ಮನೂ ಸಹ ಜ್ಞಾನ ನದಿಯಾಗಿದ್ದಾರೆ. ಇವರ ಹಾಗೂ ಜ್ಞಾನ ಸಾಗರನ ಮಿಲನದ ಮೇಳವಾಗಿದೆ, ವಾಸ್ತವಿಕವಾಗಿ ಇದನ್ನು ಸತ್ಯ ಕುಂಭ (ಸಂಗಮ) ಎಂದು ಕರೆಯಲಾಗುವುದು. ಎಲ್ಲಕ್ಕಿಂತ ಅತಿ ದೊಡ್ಡ ಮಿಲನ ಜ್ಞಾನ ಸಾಗರನ ಬಳಿ ಬರುವುದಾಗಿದೆ. ಈ ಬ್ರಹ್ಮ ಪುತ್ರ ಅತಿ ದೊಡ್ಡ ನದಿಯಾಗಿದೆ. ಮೊಟ್ಟ ಮೊದಲು ಈ ನದಿಯು ಸಾಗರದಿಂದ ಆರಂಭವಾಗಿದೆ. ಇವರೆಡರ ಸಂಗಮವಾಗಿದೆ. ಸಾಗರನಿಂದ ಆರಂಭವಾದಂತಹ ಈ ನದಿ ಬ್ರಹ್ಮಾ ಆಗಿದ್ದಾರೆ. ಇವರೇ ಮೊದಲಿಗೆ ಅಂತ್ಯವನ್ನು ತಲುಪಿ ಸಾಗರನಿಂದ ಮೊಟ್ಟ ಮೊದಲು ಜನ್ಮ ಪಡೆಯುತ್ತಾರೆ. ಪುನಃ ಸತ್ಯಯುಗದಲ್ಲಿ ಮೊದಲನೇ ಸ್ಥಾನವನ್ನು ಪಡೆಯುತ್ತಾರೆ. ಸರಸ್ವತಿ ಹಾಗೂ ಬ್ರಹ್ಮಾರವರ ಮೇಳವಲ್ಲ, ಬ್ರಹ್ಮಾಪುತ್ರ ಹಾಗೂ ಸಾಗರನ ಮೇಳವಾಗಿದೆ. ಮನುಷ್ಯರು ಕುಂಭಮೇಳದಲ್ಲಿ ಹೋಗಿ ಸ್ನಾನ ಮಾಡುತ್ತಾರೆ, ತುಂಬಾ ನದಿಗಳಿರುತ್ತವೆ. ಇಲ್ಲಂತೂ ಎಷ್ಟೊಂದು ಜ್ಞಾನ ಗಂಗೆಯರು ಬಂದು ಮಿಲನ ಮಾಡುತ್ತಾರೆ. ಇದು ತುಂಬಾ ಚೆನ್ನಾಗಿದೆ ಎಂದು ತಂದೆ ತಿಳಿಸುತ್ತಾರೆ. ಇಲ್ಲಿ ಪ್ರತಿನಿತ್ಯ ನದಿಗಳಲ್ಲಿ ಸ್ನಾನ ಮಾಡುವಂತಹವರನ್ನು ಉಳಿಸುವವರು ಯಾರು? ಈ ನದಿಗಳು ಜ್ಞಾನ ಗಂಗೆಯರಲ್ಲ, ಇವುಗಳಲ್ಲಿ ಮೀನು ಮೊಸಳೆಗಳೆಲ್ಲಾ ಸ್ನಾನ ಮಾಡುತ್ತವೆ. ಪ್ರತಿನಿತ್ಯ ಸ್ನಾನ ಮಾಡಲು ಹೋಗುವವರಿಗೆ ಈ ರೀತಿ ತಿಳಿಸಿಕೊಡಬೇಕು - ನೀವು ಈ ರೀತಿ ಮಾಡುತ್ತಾ-ಮಾಡುತ್ತಾ ಬಡವರಾಗಿ ಬಿಟ್ಟಿದ್ದೀರಿ. ತೀರ್ಥ ಯಾತ್ರೆಗಳಗಾಗಿ ಮನುಷ್ಯರು ಎಷ್ಟೊಂದು ಖರ್ಚು ಮಾಡುತ್ತಾರೆ. ಇಲ್ಲಿ ಯಾದರು ಖರ್ಚಿನ ಮಾತಿಲ್ಲ. ಯಾವಾಗ ನಾನು ಬರುತ್ತೇನೆ ಆಗ ನಾನು ಬಂದು ಸರ್ವರ ಸದ್ಗತಿ ಮಾಡುತ್ತೇನೆ. ಜ್ಞಾನವನ್ನೂ ಸಹ ಕೊಡುತ್ತೇನೆ. ಯಾವ ಜ್ಞಾನ? ಮನ್ಮನಾಭವ. ನನ್ನನ್ನು ನೆನಪು ಮಾಡಿದಾಗ ಯೋಗಾಗ್ನಿಯಿಂದ ನಿಮ್ಮ ವಿಕರ್ಮ ವಿನಾಶವಾಗಿ ಬಿಡುತ್ತದೆ. ನೀವು ಪಾವನರಾಗಿರುತ್ತೀರಿ. ನೀವು ಯೋಗದಿಂದಲ್ಲದೆ ಗಂಗಾ ಸ್ನಾನದಿಂದ ಪಾವನರಾಗುವುದಿಲ್ಲ. ವಾಸ್ತವಿಕವಾಗಿ ಇದು ಜ್ಞಾನ ಸ್ನಾನವಾಗಿದೆ. ಅದು ಗಂಗಾ ನದಿ, ಇದು ಜ್ಞಾನ ನದಿ, ಇಲ್ಲಿ ಕೇವಲ ತಂದೆಯನ್ನು ನೆನಪು ಮಾಡಬೇಕು. ಇದನ್ನು ಸ್ನಾನವೆಂದು ಹೇಳಬಾರದು. ಇಲ್ಲಿ ತಂದೆ ಮಾರ್ಗದರ್ಶನ ಕೊಡುತ್ತಾರೆ. ಜ್ಞಾನದಿಂದ ಸದ್ಗತಿಯಾಗುತ್ತದೆ. ನೀವು 21 ಜನ್ಮಗಳು ಸದ್ಗತಿಯಲ್ಲಿದ್ದು ಪುನಃ ದುರ್ಗತಿಯಲ್ಲಿ ಬರುತ್ತೀರಿ. ಸತೋಪ್ರಧಾನದಿಂದ ಸತೋ, ರಜೋ, ತಮೋಪ್ರಧಾನದಲ್ಲಿ ಅಗತ್ಯವಾಗಿ ಬರಬೇಕು. ಈ ಎಲ್ಲಾ ಮಾತುಗಳನ್ನು ನೀವು ಮಕ್ಕಳೇ ತಿಳಿದುಕೊಳ್ಳುತ್ತೀರಿ ಹಾಗೂ ಇಲ್ಲಿಗೆ ರಿಫ್ರೆಷ್ (ದಣಿವಾರಿಕೊಳ್ಳಲು) ಆಗಲು ಮಕ್ಕಳೇ ಬರುತ್ತಾರೆ ಬೇರೆ ಹೊಸ ಆತ್ಮರು ಬರುವುದಿಲ್ಲ.

ತಂದೆ ತಿಳಿಸುತ್ತಾರೆ- ನಾನು ಮಕ್ಕಳ ಮುಂದೆಯೇ ಬರುತ್ತೇನೆ. ಇವರು ಗುಪ್ತ ತಾಯಿ ಆಗಿದ್ದಾರೆ. ನೀವು ಯಾರೊಂದಿಗಾದರೂ ಪ್ರದರ್ಶನ, ಮೇಳದ ಉದ್ಘಾಟನೆ ಮಾಡಿಸುವಾಗ, ಮಾಡಿಸುವಂತಹವರಿಗೆ ಏನಾದರೂ ಸ್ವಲ್ಪ ಜ್ಞಾನ ತಿಳಿಸಿ ಉದ್ಘಾಟನೆ ಮಾಡಿಸಬೇಕು. ಯಾವುದೇ ಕಾರಣದಿಂದ ಅವರು ಹೇಗೆಂದರೆ ಹಾಗೆ ಮಾತನಾಡುವಂತೆ ಆಗಬಾರದು. ಅವರಿಂದ ಕೇವಲ

ಕಲ್ಯಾಣಕ್ಕೋಸ್ಕರ ಮಾಡಿಸಬೇಕಾಗುತ್ತದೆ. ಸ್ವಲ್ಪವೇನಾದರು ತಿಳಿದುಕೊಂಡಾಗ ಈ ಸಂಸ್ಥೆ ತುಂಬಾ ಚೆನ್ನಾಗಿದೆ ಎಂದು ಹೇಳಬಹುದು. ಇದು ಮನುಷ್ಯರನ್ನು ದೇವತೆಯನ್ನಾಗಿ ಮಾಡುವಂತಹ ಸಂಸ್ಥೆಯಾಗಿದೆ ಆದರೆ ಯಾರು ಇಷ್ಟೊಂದು ತಿಳಿಸಿಕೊಡುವುದಿಲ್ಲ, ಅವರ ಬುದ್ದಿಯಲ್ಲಿ ಜ್ಞಾನ ಕುಳಿತುಕೊಂಡಿರುವುದಿಲ್ಲ. ಯಾವ ಯಾವ ವ್ಯಕ್ತಿಗಳಿಂದ ಉದ್ಘಾಟನೆ ಮಾಡಿಸಿರುವಿರಿ, ಅವರು ಯಾವುದೇ ಮಾತನ್ನು ತಿಳಿದುಕೊಂಡಿಲ್ಲ. ಯಾರಿಗೂ ನಿಶ್ಚಯವಿಲ್ಲ. ಇಷ್ಟೊಂದು ಮಂದಿಯಲ್ಲಿ ಕೆಲವರಿಗೆ ಅರ್ಧ ನಿಶ್ಚಯವೆಂದು ಹೇಳಬಹುದು. ಅವರು ಪುನಃ ಬಂದು ಅಲ್ಪ ಸ್ವಲ್ಪ ತಿಳಿದುಕೊಳ್ಳಲು ಪ್ರಯತ್ನ ಪಡುತ್ತಾರೆ. ಸಾವಿರಾರು ಜನ ತಿಳಿದುಕೊಳ್ಳಲು ಬರುತ್ತಾರೆ. ಅವರಲ್ಲಿ 5-7 ಮಂದಿ ಉಳಿಯುತ್ತಾರೆ. ಆದುದರಿಂದ ಕೋಟಿಯಲ್ಲಿ ಕೆಲವರೆಂದು ಹೇಳುತ್ತಾರೆ. ಯಾವಾಗ ಯಾವುದೇ ಪ್ರದರ್ಶನ, ಮೇಳ ಮುಂತಾದವುಗಳನ್ನು ಮಾಡಿದಾಗ ಐದಾರು ಆತ್ಮಗಳು ತಯಾರಾಗುತ್ತಾರೆ. ಕೆಲವೊಮ್ಮೆ ಇನ್ನೂ ಕಷ್ಟದಿಂದ ಕೆಲವರು ಉಳಿದುಕೊಳ್ಳುತ್ತಾರೆ. ಕೊನೆಗೆ ಹಳೆಯ ಪಾತ್ರಧಾರಿಗಳೆ ಬರುತ್ತಿರುತ್ತಾರೆ. ಅವರಲ್ಲಿ ಕೆಲವರಿಗೆ ಅರ್ಧ ನಿಶ್ಚಯ, ಕೆಲವರಿಗೆ ಕಾಲು ಭಾಗ, ಕೆಲವರಿಗೆ 10% ನಿಶ್ಚಯವಿರುತ್ತದೆ. ಶಾಲೆಯಲ್ಲಿ ಪೂರ್ಣ ನಿಶ್ಚಯವಿಲ್ಲದೆ ಕುಳಿತುಕೊಳ್ಳುವುದಿಲ್ಲ. ನಿಶ್ಚಯವಿದ್ದಾಗ ನಾನು ವಕೀಲ ಆಗಬೇಕಾದುದರಿಂದ ಈ ಪರೀಕ್ಷೆಯಲ್ಲಿ ಅಗತ್ಯವಾಗಿ ಉತ್ತೀರ್ಣನಾಗಬೇಕು. ಇಲ್ಲಿಯಂತೂ ಸಂಶಯ ಬುದ್ಧಿಯವರೂ ಸಹ ಕುಳಿತುಕೊಂಡು ಬಿಡುತ್ತಾರೆ. ನಿಧಾನ ನಿಧಾನವಾಗಿ ಮನುಷ್ಯರಿಂದ ದೇವತೆ ಆಗುವವೆಂದು ನಿಶ್ಚಯವಾಗುತ್ತದೆ ಎಂದು ತಿಳಿಯುತ್ತಾರೆ. ಇಲ್ಲಿ ನಿಶ್ಚಯವಾಗಲು ಕುಳಿತುಕೊಳ್ಳುತ್ತಾರೆ. ನಂತರ ನಡೆಯುತ್ತಾ-ನಡೆಯುತ್ತಾ ಬಿದ್ದು ಹೋಗುತ್ತಾರೆ. 4-5 ವರ್ಷ ಓದುತ್ತಾ ಓದುತ್ತಾ ನಂತರ ಸಂಶಯದಲ್ಲಿ ಬಂದು ಹೊರಟು ಹೋಗುತ್ತಾರೆ. ಈ ವಿದ್ಯೆ ತುಂಬಾ ಶ್ರೇಷ್ಠವಾಗಿದೆ ಹಾಗೂ ಇಲ್ಲಿ ಮಾಯೆಯ ವಿಘ್ನ ಬೀಳುತ್ತಿರುತ್ತದೆ. ಮಾಯೆ ತಿಳಿದುಕೊಳ್ಳಲು ಬಿಡುವುದಿಲ್ಲ. ಮಾಯೆ ಮಕ್ಕಳ ಓದಿನಲ್ಲಿ ವಿಘ್ನವನ್ನು ಹಾಕುತ್ತದೆ. ಇದು ತುಂಬಾ ಅದ್ಭುತವಾದ ಶಾಲೆಯಾಗಿದೆ. ಈ ಮಹಿಮೆ ದಿಲ್ವಾಡ ಮಂದಿರದಲ್ಲಿ ತುಂಬಾ ಚೆನ್ನಾಗಿ ಹೇಳಬಹುದು. ಇದು ಜಡ ಮಂದಿರವಾಗಿದೆ, ಸ್ವರ್ಗ ಸ್ಥಾಪನೆಗಾಗಿ ಮಾಡಿ ಹೋಗಿರುವ ಜಗದಂಬಾ, ಜಗತ್ಪಿತ ಹಾಗು ಅವರ ಮಕ್ಕಳು, ಅವರ ಜಡ ನೆನಪಾರ್ಥ ಮಾಡಲ್ಪಟ್ಟಿದೆ ಎಂದು ತಿಳಿಸಬಹುದು. ಹೇಗೆ ಶಿವಾಜಿ ಮುಂತಾದವರೆಲ್ಲರೂ ಒಮ್ಮೆ ಚೈತನ್ಯದಲ್ಲಿದ್ದರು, ಈಗ ಅವರ ಸ್ಮಾರಕವಿದೆ. ಅದೇರೀತಿ ಈಗ ಜಗದಂಬಾ ಹಾಗೂ ಜಗತ್ಪಿತ ಚೈತನ್ಯದಲ್ಲಿ ಬಂದಿದ್ದಾರೆ. 5000 ವರ್ಷದ ನಂತರ ಅದೇ ಪಾತ್ರವನ್ನು ಮಾಡುತ್ತಾರೆ, ನಂತರ ಅವರ ಚಿತ್ರವು ಸ್ಮಾರಕ ರೂಪದಲ್ಲಿ ಮಾಡುತ್ತಾರೆ. ಮೊದಲಂತೂ ಚಿತ್ರಯಿರುವುದಿಲ್ಲ, ಈ ಚಿತ್ರಗಳೆಲ್ಲವೂ ಸಮಾಪ್ತಿಯಾಗಿ ಬಿಡುತ್ತವೆ. ನಂತರ ಮೊದಲನೇ ಚಿತ್ರವನ್ನು ಮಾಡಲು ಆರಂಭ ಮಾಡುತ್ತಾರೆ. ಮೊಟ್ಟ ಮೊದಲು ಶಿವ ತಂದೆಯ ಸ್ಮಾರಕವಿರಬೇಕು, ಅವರ ಸ್ಮಾರಕವನ್ನು ಮಾಡುತ್ತಾರೆ. ಎಲ್ಲರೂ ಪತಿತ-ಪಾವನ ನೆನಪು ಮಾಡುತ್ತಾರೆ-ಆದರೆ ನಾವು ಪತಿತರೆಂದು ತಿಳಿದುಕೊಂಡಿಲ್ಲ. ಮೂಲತಃ ಸತ್ಯ ಸತ್ಯಜ್ಞಾನ ಇದಾಗಿದೆ, ಇದರಿಂದಲೇ ಸದ್ಗತಿ ಸಿಗುತ್ತದೆ. ಗುರುಗಳಿಂದ ಜ್ಞಾನ ಸಿಗುತ್ತದೆ, ನೀರಿನ ನದಿಗಳಂತೂ ಗುರುಗಳಲ್ಲ. ಇದೆಲ್ಲವೂ ಅಂಧಶ್ರದ್ಧೆಯಾಗಿದೆ. ಕರ್ತವ್ಯವನ್ನು ತಿಳಿಯದೆ ಏನೂ ಪಡೆಯಲು ಸಾಧ್ಯವಿಲ್ಲ. ಕೇವಲ ದರ್ಶನ ಮಾಡುವುದೂ ಸಹ ವ್ಯರ್ಥವಾಗಿದೆ. ಇಲ್ಲಿ ದರ್ಶನದ ಮಾತಿಲ್ಲ. ಆದರೂ ಯಾರಾದರೂ ಹೊಸ ಮಕ್ಕಳೊಂದಿಗೆ ತಂದೆಯ ಸಂದೇಶವನ್ನು ನೀಡುವ ಸಲುವಾಗಿ ಮಿಲನ ಮಾಡಬೇಕಾಗುತ್ತದೂ ಆದರೆ ಗಣ್ಯ ವ್ಯಕ್ತಿಗಳು ಯಾರು ಸಹ ತಂದೆಯ ಸಂದೇಶವನ್ನು ತಲುಪಿಸುವುದಿಲ್ಲ. ಬಡ ಮಕ್ಕಳು ಆ ಕರ್ತವ್ಯವನ್ನು ಮಾಡುತ್ತಾರೆ. ಹೀಗೆ ಕೆಲವರು ಜ್ಞಾನ ಧನದಲ್ಲಿ ಶ್ರೀಮಂತರಾಗಿ ಬಿಟ್ಟಾಗ ತಂದೆಯ ಹೆಸರನ್ನು ಪ್ರಖ್ಯಾತ ಮಾಡಬಹುದು. ಈ ನದಿಗಳಲ್ಲಿ ಸ್ನಾನ ಮಾಡುತ್ತಲೇ ಬಂದಿದ್ದಾರೆ. ಈ ಸ್ನಾನದಿಂದ ಯಾರಿಗೂ ಸದ್ಗತಿ ಸಿಗುವುದಿಲ್ಲ. ಪತಿತ ಪಾವನ ಸದ್ಗತಿದಾತ ಒಬ್ಬ ತಂದೆಯಾಗಿದ್ದಾರೆ, ಅವರೇ ಬಂದು ಸರ್ವರ ಸದ್ಗತಿ ಮಾಡುತ್ತಾರೆ. ಒಂದು ಸೆಕೆಂಡಿನಲ್ಲಿ ಸದ್ಗತಿ ಪಡೆಯಬಹುದೆಂದು ತಂದೆಯು ತಿಳಿಸುತ್ತಾರೆ. ಶ್ರೀಮತ ಹೇಳುತ್ತದೆ - ನನ್ನನ್ನು ನೆನಪು ಮಾಡಿದಾಗ ಅಂತಿ ಮತಿ ಸೋ ಗತಿ ಆಗಿಬಿಡುತ್ತದೆ. ಇದನ್ನು ಯೋಗಾಗ್ನಿಯೆಂದು ಕರೆಯಲಾಗುವುದು, ಇದರಿಂದ ವಿಕರ್ಮ ವಿನಾಶವಾಗುತ್ತದೆ. ಆದುದರಿಂದ ತಂದೆ ತಿಳಿಸುತ್ತಾರೆ ನನ್ನನ್ನು ನೆನಪು ಮಾಡಿದಾಗ ಸದಾಕಾಲಕ್ಕೆ ಆರೋಗ್ಯವಂತರಾಗುತ್ತೀರಿ, ಅಲ್ಲದೆ ನಾನೇ ಸ್ವರ್ಗ ಸ್ಥಾಪನೆ ಮಾಡುತ್ತೇನೆ. ಈ ಚಕ್ರವನ್ನು ನೆನಪು ಮಾಡುವುದರಿಂದ ನೀವು ಚಕ್ರವರ್ತಿ ರಾಜರಾಗುತ್ತೀರಿ. ತಂದೆ ಹಾಗೂ ಆಸ್ತಿಯನ್ನು ನೆನಪು ಮಾಡಬೇಕು. ಈಗ ನಾವು ತಂದೆಯ ಬಳಿ ಹಿಂತಿರುಗಬೇಕು. ಕಲ್ಪ-ಕಲ್ಪದಲ್ಲಿ ತಂದೆ ಒಮ್ಮೆಯೇ ಬಂದು ಸದ್ಗತಿ ಮಾಡುತ್ತಾರೆ. ಅವರು ಸರ್ವರ ಸದ್ಗತಿದಾತನಾಗಿದ್ದಾರೆ. ನೀವು ಯಾರ ಸದ್ಗತಿಯನ್ನೂ ಮಾಡಲು ಸಾಧ್ಯವಿಲ್ಲ. ಶಿವ ತಂದೆಯಿಂದ ಹೊರಟಿರುವಂತಹ ಜ್ಞಾನ ಗಂಗೆಯರಾಗಿದ್ದಾರೆ. ಶಿವಕಾಶಿ ವಿಶ್ವನಾಥ ಗಂಗಾ ಇವರಾಗಿದ್ದಾರೆ. ಆದರೆ ಇವರು ನೀರಿನ ಗಂಗೆಯನ್ನು ಸದ್ಗತಿದಾತ ಪತಿತ ಪಾವನಿ ಎಂದು ತಿಳಿದುಕೊಂಡಿದ್ದಾರೆ. ನೀವು ಅವರಿಗೆ ತಿಳಿಸಿಕೊಡಬೇಕಾಗಿದೆ. ನೀವು ಯೋಗಯುಕ್ತರಾಗಿದ್ದಾಗ ಸೇವೆಯನ್ನು ಮಾಡಬಹುದು. ಯಾರು ನಷ್ಟೋಮೋಹ, ಉತ್ತಮ ಯೋಗಿಯಾಗಿರುತ್ತಾರೆ ಅವರು ಪೂರ್ಣ ಸೇವೆ ಮಾಡಬಲ್ಲರು. ಅಂತಿಮದಲ್ಲಿ ತುಂಬಾ ಸೇವೆ ನಡೆಯುತ್ತದೆ. ಸಾಧು ಮುಂತಾದವರನ್ನು ನೀವೇ ಉದ್ಧಾರ ಮಾಡಬೇಕು. ಅವರಿಗೆ ಸದ್ಗತಿದಾತ ಒಬ್ಬರೇ ಆಗಿದ್ದಾರೆಂದು ತಿಳಿಸಿಕೊಡಬೇಕು. ಅವರೇ ತಿಳಿಸುತ್ತಾರೆ - ಈಗ ನನ್ನನ್ನು ನೆನಪು ಮಾಡಿದಾಗ ನನ್ನ ಬಳಿ ಬಂದು ಬಿಡುವಿರಿ. ಮುಕ್ತಿಯಂತೂ ಒಂದು ಸೆಕೆಂಡಿನಲ್ಲಿ ಪ್ರಾಪ್ತಿಯಾಗುತ್ತದೆ. ಮುಕ್ತಿಯ ನಂತರ ಜೀವನ್ಮುಕ್ತಿಯಂತೂ ಇದ್ದೇ ಇರುತ್ತದೆ. ಈ ಮಾತುಗಳನ್ನು ಬಹಳ ತಿಳಿದುಕೊಳ್ಳಬೇಕಾಗಿದೆ. ಎಲ್ಲರೂ ಒಂದೇರೀತಿ ಧಾರಣೆ ಮಾಡುವುದಿಲ್ಲ. ನಂಬರ್ವಾರ್ ಪುರುಷಾರ್ಥದ ಅನುಸಾರ ಧಾರಣೆಯಾಗುತ್ತದೆ. ಒಳ್ಳೊಳ್ಳೆಯ ಜ್ಞಾನ ಬಿಂದುಗಳಿವೆ. ಆ ಎಲ್ಲಾ ಜ್ಞಾನ ಬಿಂದುಗಳನ್ನು ಧಾರಣೆ ಮಾಡಿದಾಗ ನಶೆ ಏರುತ್ತದೆ.

ತಂದೆ ತುಂಬಾ ಸಹಜಕ್ಕಿಂತಲೂ ಸಹಜ ವಿಧಿ ತಿಳಿಸಿಕೊಟ್ಟರೂ ಸಹ ಕೆಲವು ಮಕ್ಕಳು ತಂದೆಯ ಕೃಪೆ ಮಾಡು, ಶಕ್ತಿ ಕೊಡು ಎಂದು ಬರೆಯುತ್ತಾರೆ. ಆಗ ಬಾಬಾ ಇಂತಹವರನ್ನು ಭಕ್ತಿ ಬುದ್ಧಿಯವರೆಂದು ತಿಳಿದುಕೊಳ್ಳುತ್ತಾರೆ. ತುಂಬಾ ಭಕ್ತರಿದ್ದಾರೆ ಹಾಗೂ ಎಲ್ಲರು ಪತಿತ ಪಾವನ ಬಾ ಎಂದು ಮಹಿಮೆ ಮಾಡುತ್ತಾರೆ. ತಂದೆಯನ್ನು ಎಲ್ಲರೂ ನೆನಪು ಮಾಡುತ್ತಾರೆ. ಓ ಪರಮಪಿತ ಪರಮಾತ್ಮ ಎಂದು ಹೇಳುತ್ತಾರೆ, ಆದರೆ ತಿಳಿದುಕೊಳ್ಳುವುದಿಲ್ಲವೆಂದಾಗ ದಯೆ ಕೃಪೆ ಹೇಗೆ ಮಾಡುತ್ತಾರೆ. ಇವರು ತ್ರಿಮೂರ್ತಿಗಳಾಗಿದ್ದಾರೆ. ಮೇಲೆ ಶಿವ ತಂದೆ ನಂತರ ಬ್ರಹ್ಮಾಕುಮಾರ-ಕುಮಾರಿಯರಂತೂ ಇಲ್ಲಿಯೇ ಹಾಜರಿದ್ದೇವೆ. ಸ್ತ್ರೀ ಪುರುಷರಿಬ್ಬರು ನಾವು ಬ್ರಹ್ಮಾಕುಮಾರ ಕುಮಾರಿಯರೆಂದು ಹೇಳುತ್ತಾರೆ, ಹೀಗೆ ಇಬ್ಬರೂ ಸಹೋದರ-ಸಹೋದರಿಯಾಗಿ ಬಿಟ್ಟರು. ನೀವೂ ಸಹ ಪ್ರಜಾಪಿತ ಬ್ರಹ್ಮನ ಸಂತಾನರಾಗಿದ್ದು ಈಗ ಇಲ್ಲವಾಗಿದೆ. ನೀವು ತಿಳಿದುಕೊಂಡಿಲ್ಲ - ಪರಮಪಿತ ಪರಮಾತ್ಮ ಪ್ರಜಾಪಿತ ಬ್ರಹ್ಮನ ಮೂಲಕ ಮನುಷ್ಯ ಸೃಷ್ಟಿಯನ್ನು ರಚಿಸುವರೆಂದಾಗ ಮೊಟ್ಟ ಮೊದಲು ಬ್ರಾಹ್ಮಣ ಧರ್ಮವಿರುತ್ತದೆಯೆಂದು ಹೇಳುವರು. ಸೃಷ್ಟಿ ರಚನೆ ಮಾಡುವಾಗ ಬ್ರಹ್ಮಾಕುಮಾರ ಕುಮಾರಿಯರು ಇರುತ್ತಾರೆ, ನಂತರ ಧರ್ಮದ ಸ್ಥಾಪನೆಗಾಗಿ ಉಳಿದ ಅನೇಕ ಧರ್ಮಗಳು ವಿನಾಶವಾಗಿ ಬಿಡುತ್ತದೆ. ಈ ಸಮಯದಲ್ಲಿ ನೀವು ಬ್ರಹ್ಮಾಕುಮಾರ ಹಾಗೂ ಕುಮಾರಿ ಆಗಿದ್ದೀರಿ, ಪುನಃ ದೈವೀಕುಮಾರ ಕುಮಾರಿ ಆಗುತ್ತೀರಿ. ಹೀಗೆ ಒಮ್ಮೆ ವಿಷ್ಣು ಕುಮಾರ, ಒಮ್ಮೊಮ್ಮೆ ಭಿನ್ನ ಭಿನ್ನ ನಾಮ ರೂಪದಲ್ಲಿ ಜನ್ಮ ಪಡೆಯುತ್ತೀರಿ. ಈಗ ನೀವು ಈಶ್ವರೀಯ ಕುಮಾರ ನಂತರ ದೈವೀ ಕುಮಾರ.......... ಎಲ್ಲದಕ್ಕಿಂತ ಮುಂಚೆ ಬೇರೆ ಬೇರೆ ಹೆಸರುಗಳನ್ನು ಇಡುತ್ತಾರೆ. ಸತ್ಯಯುಗದಲ್ಲಿ ಇಂತಹ ಹೆಸರುಗಳು ಇರುವುದಿಲ್ಲ. ತಂದೆಯು ನಿಮಗೆ ಎಷ್ಟೊಂದು ಒಳ್ಳೊಳ್ಳೆಯ ರಮಣೀಕವಾದ ಹೆಸರುಗಳನ್ನು ಕಳಿಸಿದ್ದರು. ಮಕ್ಕಳೀಗ ತಂದೆಯ ಆದೇಶದಂತೆ ಧಾರಣೆ ಮಾಡಬೇಕು. ಬೇಹದ್ದಿನ ವ್ಯಾಪಾರ ನಿಮ್ಮದಾಗಿದೆ. ಉತ್ತಮ ವ್ಯಾಪಾರ ಮಾಡಿದಾಗ 21 ಜನ್ಮಗಳಿಗೆ ಉತ್ತಮವಾದ ಪದವಿ ಸಿಗುತ್ತದೆ. ಪುರುಷಾರ್ಥ ಮಾಡಿ ಬಡ ಅಬಲೆಯರೇ ಉತ್ತಮ ಆಸ್ತಿ ಪಡೆಯುತ್ತಾರೆ, ಶ್ರೀಮಂತರು ಪಡೆಯುವುದಿಲ್ಲ. ಶ್ರೀಮಂತರಲ್ಲಿ ಸಹೋದರಿಯರು ಸ್ವಲ್ಪ ಪಡೆಯುತ್ತಾರೆ. ಪುರುಷರಿಗೆ ಹಣದ ಮೇಲೆ ವ್ಯಾಮೋಹವಿರುತ್ತದೆ. ನನ್ನದು-ನನ್ನದು ಎಂದು ಕೂಡಿಡುತ್ತಿರುತ್ತಾರೆ. ಲೌಕಿಕ ತಂದೆಯ ಆಸ್ತಿಗೆ ಗಂಡು ಮಕ್ಕಳಷ್ಟೆ ಅಧಿಕಾರಿಗಳಾಗುತ್ತಾರೆ. ಇಲ್ಲಿ ತಂದೆ ತಿಳಿಸುತ್ತಾರೆ - ಪುರುಷರಾಗಿರಬಹುದು, ಸ್ತ್ರೀಯರಾಗಿರಬಹುದು. ಇಬ್ಬರೂ ಸಹ ಆಸ್ತಿಯನ್ನು ಪಡೆಯಬಹುದು. ಮಾತೆಯರೇ ಹೆಚ್ಚು ಆಸ್ತಿಯನ್ನು ಪಡೆಯುವರು, ಆದುದರಿಂದ ಶಕ್ತಿಯರ ಹೆಸರನ್ನು ಮಹಿಮೆ ಮಾಡುತ್ತಾರೆ. ಕನ್ನೆಯರು ಹಾಗು ಮಾತೆಯರು ಉತ್ತಮ ಪದವಿಯನ್ನು ಪಡೆಯುವ ಕಾರಣ ತಂದೆಗೆ ಕನ್ನಯ್ಯನೆಂದು ಕರೆಯಲಾಗುತ್ತದೆ.

ಈ ದಿಲ್ವಾಡ ಮಂದಿರ ಪೂರ್ತಿ ನಿಮ್ಮದೆ ನನಪಾರ್ಥವಾಗಿದೆ. ಅನ್ಯರಿಗೆ ತಿಳಿಸಿಕೊಡುವಾಗ ಬಹಳ ನಶೆ ಏರಬೇಕು. ತೀರ್ಥ ಯಾತ್ರೆಗಳಲ್ಲಿ ಇನ್ನೂ ಹೆಚ್ಚು ಸೇವೆ ಆಗುತ್ತದೆ. ಈಗ ತುಂಬಾ ಜ್ಞಾನವು ಪ್ರಾಪ್ತಿಯಾಗಿದೆ. ಸದ್ಗತಿಯನ್ನು ಜ್ಞಾನಸಾಗರನಲ್ಲದೆ, ನೀರಿನ ಸಾಗರದಿಂದ ಆಗುವುದಿಲ್ಲ. ಸದ್ಗತಿದಾತ ಗೀತೆಯ ಭಗವಂತನೇ ಆಗಿದ್ದಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಜ್ಞಾನ ಧನದಿಂದ ಶ್ರೀಮಂತರಾಗಿ ತಂದೆಯನ್ನು ಪ್ರಖ್ಯಾತ ಮಾಡುವ ಸೇವೆ ಮಾಡಬೇಕು. ಸಂಪೂರ್ಣ ನಿಶ್ಚಯ ಬುದ್ಧಿಯವರಾಗಬೇಕು. ಯಾವ ಮಾತಿನಲ್ಲಿಯೂ ಸಹ ಸಂಶಯ ಪಡಬಾರದು.

2. ತಂದೆಯಿಂದ ಸಂಪೂರ್ಣ ಆಸ್ತಿ ತೆಗೆದುಕೊಳ್ಳುವ ಸಲುವಾಗಿ "ನನ್ನದು-ನನ್ನದು" ಎಂಬ ಮೋಹವನ್ನು ಬಿಡಬೇಕು. ಲೌಕಿಕ ಆಸ್ತಿಯ ನಶೆಯನ್ನು ಇಟ್ಟುಕೊಳ್ಳಬಾರದು.

ವರದಾನ: ಆಶೀರ್ವಾದಗಳ ರಾಕೆಟ್ ಮೂಲಕ ತೀವ್ರ ಗತಿಯಿಂದ ಹಾರುವಂತಹ ವಿಘ್ನ ಮುಕ್ತ ಭವ.

ಮಾತಾ-ಪಿತ ಹಾಗೂ ಸರ್ವ ಸಂಬಂಧಗಳಲ್ಲಿ ಬರುತ್ತಾ, ತಮ್ಮನ್ನು ಆಶೀರ್ವಾದಗಳ ಖಜಾನೆಯಿಂದ ಸಂಪನ್ನ ಮಾಡಿಕೊಳ್ಳುತ್ತೀರೆಂದರೆ ಪುರುಷಾರ್ಥದಲ್ಲೆಂದಿಗೂ ಪರಿಶ್ರಮ ಪಡಬೇಕಾಗಿರುವುದಿಲ್ಲ. ಹೇಗೆ ವಿಜ್ಞಾನದಲ್ಲಿ ಅತಿ ವೇಗವಾಗಿರುವುದು ರಾಕೆಟ್ ಆಗಿರುತ್ತದೆ, ಅದೇರೀತಿ ಸಂಗಮಯುಗದಲ್ಲಿ ಅತಿ ವೇಗದಿಂದ ಮೇಲೆ ಹಾರುವ ಯಂತ್ರ ಅಥವಾ ಅದಕ್ಕಿಂತಲೂ ಶ್ರೇಷ್ಠವಾದ ರಾಕೆಟ್ "ಸರ್ವರ ಆಶೀರ್ವಾದ" ಆಗಿದೆ, ಇದರಿಂದ ಯಾವುದೇ ವಿಘ್ನಗಳಾಗಲಿ ಸ್ವಲ್ಪವೂ ಸ್ಪರ್ಷಿಸಲು ಸಾಧ್ಯವಿಲ್ಲ, ಇದರಿಂದ ವಿಘ್ನಮುಕ್ತರು ಆಗಿ ಬಿಡುತ್ತೀರಿ, ಯುದ್ಧ ಮಾಡಬೇಕಾಗಿರುವುದಿಲ್ಲ.

ಸ್ಲೋಗನ್: ಪರೋಪಕಾರದ ಭಾವನೆಯಿಂದ ಸಂಪನ್ನರಾಗುವುದೇ ಶ್ರೇಷ್ಠತೆಗೆ ಆಧಾರವಾಗಿದೆ.